## ॥ ಜಯ ನಿತಾಯ್ ಗೌರಾಂಗ ॥

''ಶ್ರೀಲ ಭಕ್ತಿವೇದಾಂತ ಸ್ವಾಮಿ ಪ್ರಭುಪಾದರಿಗೆ ಅರ್ಪಿತ''

✉ ಆರ್. ಪ್ರವೀಣ್ ಕುಮಾರ್

ಕಲ್ಲು ಎಸೆದರೂ
ಹೂವು ನೀಡುವ
ನಮ್ಮ ನಿತಾಯ್ ಗೌರಾಂಗ
ನಮೋ ನಿತಾಯ್ ಗೌರಾಂಗ ॥ಪ॥

ಮುಳ್ಳು ಸಹ
ಹೂವಾಗುವುದು
ದೊರಕಲು ಇವರ ಪಾದದ ಸಂಗ
ಹಾಡು ಕೇಳಿ
ಕುಣಿಯುವವು
ಕಾಡು ಮೃಗಗಳು ರಂಗ ರಂಗ ॥ಪ॥

ಕಲ್ಲು ಸಹ
ಕರಗುವುದು
ದೊರಕಲು ಗೌರ ಭಕ್ತ ಸಂಗ
ಪಾಪಿ ಸಹ
ಪಾವನನಾಗುವನು
ಸಾಟಿಯಿಲ್ಲದ ಕರುಣೆ ನಿನ್ನದು ಗೌರಾಂಗ ॥ಪ॥

ಭಕ್ತಿವೇದಾಂತ ದರ್ಶನ ಚೆನ್ನಾಗಿ ಬರುತ್ತಿದೆ. ಪುಟಗಳ ಸಂಖ್ಯೆ ಹೆಚ್ಚಿಸಿದ್ದು ಸಂತೋಷವಾಯಿತು. ಮಕ್ಕಳಿಗಾಗಿ 'ಬಾಲಗೋಕುಲ' ಆರಂಭಿಸಿದಂತೆ ಮಹಿಳೆಯರಿಗೂ ವಿಶೇಷ ಪುರವಣಿ ನೀಡಿದರೆ ಸಂತಸವಾಗುತ್ತಿತ್ತು. ಕೃಷ್ಣಪಾಕಶಾಲೆಯ ವೈವಿಧ್ಯ ತಿನಿಸುಗಳ ಜೊತೆಗೆ ಅವುಗಳ ಕ್ಯಾಲೊರಿ, ಪ್ರೋಟೀನ್, ವಿಟಮಿನ್‌ಗಳ ಪ್ರಮಾಣವನ್ನೂ ಹಾಕಿದರೆ ಒಳ್ಳೆಯದು.

✉ **ಸುಮತಿ ಎಸ್.ಎನ್.**, 11ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು

## ತಪ್ಪು - ಒಪ್ಪು

**ಲೇಖನ : ಶ್ರೀ ಪಾಂಡುರಂಗ ವಿಟ್ಠಲ - ನೆಲೆ ಹಿನ್ನೆಲೆ, ಪುಟ ಸಂಖ್ಯೆ : 14**

ವಾಸ್ತವವಾಗಿ ಪುರಾಣಗಳು ಐದು ಸಾವಿರ ವರ್ಷಗಳಷ್ಟು ಪ್ರಾಚೀನ ಕೃತಿಗಳು. ಅನಾದಿಯೂ ಅಪೌರುಷೇಯವೂ ಆದ 18 ಪುರಾಣಗಳನ್ನು ಶ್ರೀಕೃಷ್ಣನ ಅಂಶಾವತಾರ ಶ್ರೀವೇದವ್ಯಾಸರು ಬರಹ ರೂಪದಲ್ಲಿ ಸಂಕಲಿಸಿರುವರು. ಲೇಖಕರು ಇತಿಹಾಸಕಾರರ ಅಭಿಪ್ರಾಯ ದಾಖಲಿಸುವ ಭರದಲ್ಲಿ ಪುರಾಣಗಳ ಕಾಲವನ್ನು ಕ್ರಿ.ಶ. 1-5 ಎಂದು ಉಲ್ಲೇಖಿಸಿ ಬರೆದಿದ್ದನ್ನು ತಿದ್ದುಪಡಿಮಾಡಲಾಗಿತ್ತಾದರೂ ಬೆರಳಚ್ಚುಗಾರರ ಕಣ್ತಪ್ಪಿನಿಂದ ದೋಷವು ಹಾಗೇ ಉಳಿದುಬಿಟ್ಟಿರುವುದು.

ಮಾನ್ಯ ಓದುಗರು ಪುರಾಣಗಳ ಕಾಲದ ವಿಚಾರದಲ್ಲಿ ಸಂಶಯ ತಾಳಬಾರದಾಗಿ ನಮ್ಮ ವಿನಂತಿ. ವೈಜ್ಞಾನಿಕವಾಗಿ ನಡೆಸುತ್ತೇವೆಂದು ಹೇಳಿಕೊಳ್ಳುವ ಐತಿಹಾಸಿಕ ಸಂಶೋಧನೆಗಳು ಅದೆಷ್ಟು ಹುಸಿಯಾಗಿರುತ್ತವೆಯೆಂಬುದನ್ನು ಭಕ್ತಿವೇದಾಂತ ದರ್ಶನದ 2007ರ ಸುವರ್ಣ ಕರ್ನಾಟಕ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಗಿದ್ದ ''ನಿಷೇಧಿತ ಪುರಾತತ್ತ್ವ, ಏನಿದರ ಮಹತ್ತ್ವ?'' ಲೇಖನದಿಂದ ತಿಳಿಯಬಹುದು.

ಇನ್ನೆಂದಿಗೂ ಪತ್ರಿಕೆಯಲ್ಲಿ ಈ ಬಗೆಯ ದೋಷಗಳು ನುಸುಳದಂತೆ ಎಚ್ಚರ ವಹಿಸಲಾಗುವುದು.




ರಾಧಾಗೋವಿಂದ
ಝೂಲನ್ ಉತ್ಸವ
12-16, ಆಗಸ್ಟ್ 2008

ಕಾರ್ಯಕ್ರಮ: ರಾತ್ರಿ 7:00 ರಿಂದ 8:30ರವರೆಗೆ
ಹರೇಕೃಷ್ಣ ಗಿರಿ, ಬೆಂಗಳೂರು-10